ಓ.ಎಸ್. – 105/2020

ಡಿ. ಡಬ್ಲೂ – 1

ಸಾಕ್ಷಿಯನ್ನು ದಿಃ 13.08.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಆರ್.ಕೆ ರವರಿಂದ**

**1.** ನನ್ನ ಮತ್ತು ವಾದಿಯ ಮನೆ ಇರುವ ಪ್ರದೇಶಕ್ಕೆ ನೆಹರೂ ನಗರ ಎಂದು ಕರೆಯುತ್ತಾರೆ. ನೆಹರೂ ನಗರ ತುಂಬಾ ಹಳೆಯ ಬಡಾವಣೆ ಎಂದರೆ ಸರಿ. ಸದರಿ ಬಡಾವಣೆ ಟೌನ್ ಪ್ಲಾನಿಂಗ್ ಅಥೋರಿಟಿಯಿಂದ ಆದಂತಹ ಬಡಾವಣೆ ಎಂದರೆ, ಇರಬಹುದು. ನಮ್ಮ ಮನೆ ಇರುವ ಏರಿಯಾಗೆ ನಗರಸಭೆಯಿಂದ ಅನುಮೋದನೆಯಾದ ನಕ್ಷೆ ಇಲ್ಲ ಎಂದರೆ, ನನಗೆ ಗೊತ್ತಿಲ್ಲ. ಈ ದಾವೆಯನ್ನು ದಾಖಲಿಸಿದಾಗ ವಾದಿಯು ದಾವಾ ಆಸ್ತಿಯ ಸಂಪೂರ್ಣ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ. ಸಾಕ್ಷಿಯು ನಿಪಿ–12 ರ ದಾಖಲೆಯನ್ನು ನೋಡಿ ಸದರಿ ದಾಖಲೆಯು ವಾದಿಯು ದಾವಾ ಸ್ವತ್ತಿನಲ್ಲಿ ಮನೆಯನ್ನು ಕಟ್ಟುವಾಗ ಸಾಗರದ ನಗರಸಭೆಯಿಂದ ಪಡೆದ ಅನುಮೋದನೆ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ. ನಿಪಿ–10 ದಾವಾ ಸ್ವತ್ತಿನ ವಾದಿಯ ಹೆಸರಿಗೆ ಇರುವ ಇ–ಖಾತಾ ನಕಲು ಎಂದರೆ ಸರಿ. ನಿಪಿ–2 ದಾವಾ ಸ್ವತ್ತಿಗೆ ವಾದಿಯು ಕಾಂಪೌಂಡ್ ಹಾಕುವ ಮೊದಲು ಪಡೆದ ಪರವಾನಗಿ ಎಂದರೆ ಸರಿ.

**2.** 2020 ಮೇ ತಿಂಗಳಲ್ಲಿ ನಾವು ಹೊಸ ಮನೆಯನ್ನು ಕಟ್ಟಲು ಫೌಂಡೇಶನ್ ಅನ್ನು ಹಾಕಿ, 2020 ಡಿಸೆಂಬರ್ ನಲ್ಲಿ ಮನೆಯ ಕಟ್ಟಡ ನಿರ್ಮಾಣ ಕಾರ್ಯವನ್ನು ಮುಕ್ತಾಯ ಮಾಡಿದೆವು. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿಯು ತಪ್ಪು ಮಾಹಿತಿ ನೀಡಿದ್ದು, ಕೆಲವು ವಿದ್ಯಾಮಾನಗಳನ್ನು ಮುಚ್ಚಿಟ್ಟಿದ್ದಾರೆ ಎಂದು ಬರೆಸಿದ್ದೇನೆ ಎಂದರೆ ಸರಿ. ನಾವು ವಾದಿಯರ ಜಾಗವನ್ನು ಒತ್ತುವರಿ ಮಾಡಿಲ್ಲ. ಆದರೂ ಸಹ ನಮ್ಮ ಜಾಗದಲ್ಲಿ ವಾದಿಯರ ಜಾಗ ಇದೆ ಎಂದು ಹೇಳುತ್ತಿದ್ದಾರೆ. 2020 ಮೇ ತಿಂಗಳಲ್ಲಿ ವಾದಿಯರು ಕಾಂಪೌಂಡ್ ಕಟ್ಟಲು ಬಂದಿದ್ದರು. ಆಗ ನಮ್ಮ ಜಾಗವು 48 x 69 ಅಡಿ ಇದ್ದು, ಅದನ್ನು ಅಳತೆ ಮಾಡಿ ನಂತರ ನೀವು ಕಾಂಪೌಂಡ್ ಹಾವಿಕೊಳ್ಳಿ ಎಂದು ತಿಳಿಸಿದೆವು. ನಂತರ ವಾದಿ ಮತ್ತು ಅವರ ಮಗ ನಮ್ಮ ಸ್ವತ್ತಿನ ಅಳತೆಯನ್ನು

ಮಾಡಿದರು. ವಾದಿಯರ ಕಾಂಪೌಂಡ್ ನಿರ್ಮಾಣ ಕಾರ್ಯವನ್ನು ನಾವು ತಡೆದಿಲ್ಲ. ಆದರೆ ಅಳತೆ ಮಾಡಿ ನಮ್ಮ ಜಾಗವನ್ನು ಬಿಟ್ಟು ಕಾಂಪೌಂಡ್ ಹಾಕುವಂತೆ ವಾದಿಯರಿಗೆ ಹೇಳಿದೆವು.

**3.** ನ್ಯಾಯಾಲಯವು ನನಗೆ ಹಾಗೂ ವಾದಿಗೆ ಯಥಾ ಸ್ಥಿತಿಯನ್ನು ಕಾಪಾಡಿಕೊಂಡು ಹೋಗುವಂತೆ ಆದೇಶ ಮಾಡಿತ್ತು ಎಂದರೆ ಸರಿ. ಆ ಆದೇಶವನ್ನು ನಾನು ಉಲ್ಲಂಘಿಸಿ ನನ್ನ ಮತ್ತು ವಾದಿಯ ಸ್ವತ್ತುಗಳ ನಡುವೆ ಇದ್ದ ಬೇಲಿಯನ್ನು ಕಿತ್ತು, ವಾದಿಯ ದಾವಾ ಬಿ ಸ್ವತ್ತನ್ನು ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 25.06.2020 ರಂದು ವಾದಿಗೆ ಕಾಂಪೌಂಡ್ ಅನ್ನು ಕಟ್ಟದಂತೆ ನಾನು ತಡೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ಸ್ವತ್ತುಗಳನ್ನು ನ್ಯಾಯಾಲಯದ ನಿಯೋಗಿ ಮೂಲಕ ಅಳತೆ ಮಾಡಿಸಿ ವರದಿ ತರಿಸಿಕೊಳ್ಳಲು ನನಗೆ ಯಾವುದೇ ಆಕ್ಷೇಪಣೆ ಇಲ್ಲ. ದಾವಾ ಬಿ ಸ್ವತ್ತನ್ನು ನಾನು ಅತಿಕ್ರಮಣ ಮಾಡಿರುವುದರಿಂದ ಅದನ್ನು ನಿಯಮಾನುಸಾರ ತೆರವುಗೊಳಿಸಿ ವಾದಿಗೆ ಸ್ವಾಧೀನವನ್ನು ವಹಿಸಿಕೊಡಲು ಬಾಧ್ಯಳಾಗಿದ್ದೇನೆ ಎಂದರೆ ಸರಿಯಲ್ಲ. ಕಾರಣ ನಾನು ಯಾವುದೇ ಒತ್ತುವರಿ ಮಾಡಿಲ್ಲ ಎನ್ನುತ್ತಾರೆ. ವಾದಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.